ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1147
ವಿಧಾನ ಪರಿಷತ್ತಿನ ಸದಸ್ಯರು	:	ಶ್ರೀ. ಹೆಚ್.ಎಂ. ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	22.09.2021
ಉತ್ತರಿಸುವ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>KVAFSU, Bidar ವಿಶ್ವವಿದ್ಯಾಲಯದಲ್ಲಿ ಎಷ್ಟು ಸಿಬ್ಬಂದಿಗಳನ್ನು ಯಾವ ಯಾವ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ; (ವಿವರ ನೀಡುವುದು).</td><td>ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.
<table>
<tr><th>ಕ್ರ.ಸಂ</th><th>ಹುದ್ದೆಗಳು</th><th>ಒಟ್ಟು</th><th>ಅವಧಿ</th></tr>
<tr><td>01</td><td>ಸಹಾಯಕ ಪ್ರಾಧ್ಯಾಪಕರು</td><td>133</td><td>179 ದಿವಸಗಳಿಗೆ</td></tr>
<tr><td>02</td><td>ವಿವಿಧ ಬೋಧಕೇತರ ಸಿಬ್ಬಂದಿಗಳು
(ಸಂಚಿತ ಕನಿಷ್ಠ ಮೂಲವೇತನ
(Basic pay)</td><td>128</td><td>179 ದಿವಸಗಳಿಗೆ ಸೀಮಿತವಾಗಿ</td></tr>
<tr><td>03</td><td>ವಿವಿಧ ಬೋಧಕೇತರ ಸಿಬ್ಬಂದಿಗಳು (ಕನಿಷ್ಠ ವೇತನ Minimum wages)</td><td>472</td><td>179 ದಿವಸಗಳಿಗೆ ಸೀಮಿತವಾಗಿ</td></tr>
</table></td></tr>
<tr><td>ಆ)</td><td>ತಾತ್ಕಾಲಿಕವಾಗಿ ನೇಮಿಸಿಕೊಂಡ ಸಿಬ್ಬಂದಿಗಳಿಗೆ ಎಷ್ಟು ವೇತನವನ್ನು ಹಾಗೂ ಯಾವ ಯಾವ ಆಧಾರದಲ್ಲಿ/ ನಿಯಮದಂತೆ ವೇತನ ನೀಡಲಾಗುತ್ತಿದೆ; ವೇತನ ಹೊರತುಪಡಿಸಿ ಮತ್ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ;</td><td>ತಾತ್ಕಾಲಿಕವಾಗಿ ನೇಮಿಸಿಕೊಂಡ ಸಿಬ್ಬಂದಿಗಳಿಗೆ ಈ ಕೆಳಕಡಂತೆ ವೇತನವನ್ನು ನೀಡಲಾಗುತ್ತಿದೆ.
<table>
<tr><th>ಕ್ರಸಂ</th><th>ಹುದ್ದೆಗಳು</th><th>ಒಟ್ಟು ಸಿಬ್ಬಂದಿ</th><th>ಅವಧಿ</th><th>ವೇತನ</th></tr>
<tr><td>01</td><td>ಸಹಾಯಕ ಪ್ರಾಧ್ಯಾಪಕರು</td><td>133</td><td>179 ದಿವಸಗಳಿಗೆ ಸೀಮಿತವಾಗಿ</td><td>ರೂ.57600/- ಪ್ರತಿ ತಿಂಗಳಿಗೆ</td></tr>
</table></td></tr>
</table>

<table>
<tr><td></td><td></td><td>
<table>
<tr><td>02</td><td>ವಿವಿಧ ಬೋಧಕೇತರ ಸಿಬ್ಬಂದಿಗಳು (ಸಂಚಿತ ಕನಿಷ್ಠ ಮೂಲವೇತನ Basic pay)</td><td>128</td><td>179 ದಿವಸಗಳಿಗೆ ಸೀಮಿತವಾಗಿ</td><td>ಆಯಾ ಹುದ್ದೆಯ ಕನಿಷ್ಠ ಮೂಲವೇತನ (Basic pay)</td></tr>
<tr><td>03</td><td>ವಿವಿಧ ಬೋಧಕೇತರ ಸಿಬ್ಬಂದಿಗಳು (ಕನಿಷ್ಠವೇತನ Minimum wages)</td><td>472</td><td>179 ದಿವಸಗಳಿಗೆ ಸೀಮಿತವಾಗಿ</td><td>ಆಯಾ ಹುದ್ದೆಯ (ಕನಿಷ್ಠ ವೇತನ Minimum wages)</td></tr>
</table>
ಮುಂದುವರೆದು, ತಾತ್ಕಾಲಿಕವಾಗಿ ನೇಮಿಸಿಕೊಂಡ ಸಿಬ್ಬಂದಿಗಳಿಗೆ ಮೇಲೆ ತಿಳಿಸಿದ ವೇತನ ಹೊರತು ಪಡಿಸಿ ಮತ್ಯಾವ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ.
</td></tr>
<tr><td>ಇ)</td><td>ವಿಶ್ವವಿದ್ಯಾಲಯಕ್ಕೆ ನೇಮಿಸಿಕೊಂಡ ಸಿಬ್ಬಂದಿಗಳಿಗೆ ಕ್ರೂಢೀಕೃತ ವೇತನ ನೀಡುತ್ತಿದ್ದು, ಮೀನುಗಾರಿಕೆ ಕಾಲೇಜಿನ AICRP ಯೋಜನೆಯ ತಾತ್ಕಾಲಿಕ ಸಿಬ್ಬಂದಿಗಳಿಗೆ ಯಾವ ನಿಯಮದಂತೆ UGC ವೇತನ ಶ್ರೇಣಿ, ವಾರ್ಷಿಕ ವೇತನ ಮುಂಬಡ್ತಿ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ; ರಾಜ್ಯ ಸರ್ಕಾರದ ಅರ್ಥಿಕ ಇಲಾಖೆಯಿಂದ ಒಪ್ಪಿಗೆ ಪಡೆಯಲಾಗಿದೆಯೇ; (ದಾಖಲೆ ಒದಗಿಸುವುದು).</td><td>AICRP ಯೋಜನೆಯು ಅದರ ಪ್ರಧಾನ ಸಂಶೋಧಕರ ಪ್ರಸ್ತಾವನೆಯಂತೆ ದೀರ್ಘಕಾಲಾವಧಿಗೆ Co-tenure ಆಧಾರದ ಮೇಲೆ ICAR ಧನಸಹಾಯ ಸಂಸ್ಥೆ ಈ ಯೋಜನೆಗೆ ಕೊಡಮಾಡಿರುವ ಹುದ್ದೆಗಳಿಗನುಸಾರ ನೇಮಕ ಮಾಡಿದೆ. Co-tenure ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವುದರಿಂದ ಯುಜಿಸಿ ವೇತನ ಶ್ರೇಣಿ ಮತ್ತು ಭತ್ಯೆ ನೀಡಿದೆ. ಈಗ ಆರಂಭಿಕ ಕನಿಷ್ಟ ವೇತನ ನೀಡುತ್ತಿದ್ದು ವಾರ್ಷಿಕ ಮುಂಬಡ್ತಿ ವೇತನ ನೀಡುತ್ತಿಲ್ಲ. ಈ ಯೋಜನೆಗೆ ICAR ಸಂಸ್ಥೆಯು ಪ್ರಧಾನ ಧನ ಸಹಾಯ ಸಂಸ್ಥೆಯಾಗಿದ್ದು, ಅದರ ಅನುಮೋದನೆಯಿಂದ ಪ್ರತಿವರ್ಷವು ಹಣ ಬಿಡುಗಡೆಯಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಪ್ರತಿವರ್ಷವು ಆಯವ್ಯಯ ಅಂದಾಜು ವಿವರಗಳನ್ನು ಅನುದಾನ ಪಡೆಯಲು ಸಲ್ಲಿಸುವಾಗ ಅದರಲ್ಲಿ AICRP ಕುರಿತಂತೆಯೂ ನಮೂದಿಸಲಾಗಿರುತ್ತದೆ. ವಿಶ್ವವಿದ್ಯಾಲಯದಲ್ಲಿ ಅನೇಕ ಸಂಶೋಧನಾ ಯೋಜನೆಗಳು ಚಾಲ್ತಿಯಲ್ಲಿದ್ದು ಪ್ರತ್ಯೇಕವಾಗಿ ಸಂಶೋಧನೆ ಯೋಜನೆಗಳಿಗೆ ಅರ್ಥಿಕ ಇಲಾಖೆಯಿಂದ ಒಪ್ಪಿಗೆ ಪಡೆಯುತ್ತಿರುವುದಿಲ್ಲ.</td></tr>
</table>

ಈ)	AICRP ಯೋಜನೆಯ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನ ಶ್ರೇಣಿ, ವಾರ್ಷಿಕ ವೇತನ ಮುಂಬಡ್ತಿ ಇತ್ಯಾದಿ ಸೌಲಭ್ಯಗಳನ್ನು ಮೀನುಗಾರಿಕೆ ಕಾಲೇಜು ಹೊರತುಪಡಿಸಿ ಬೇರೆ ಯಾವುದಾದರೂ ಸಂಸ್ಥೆಗಳಲ್ಲಿ ನೀಡಲಾಗುತ್ತಿದೆಯೇ;	AICRP ಯೋಜನೆ ಸಿಬ್ಬಂದಿಗಳ ವೇತನ ಶ್ರೇಣಿ, ವಾರ್ಷಿಕ ವೇತನ, ಮುಂಬಡ್ತಿ ಇತ್ಯಾದಿ ಸೌಲಭ್ಯಗಳನ್ನು ಮೀನುಗಾರಿಕೆ ಕಾಲೇಜು ಹೊರತುಪಡಿಸಿ, ಪಶ್ಚಿಮ ಬಂಗಾಳದ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದಲ್ಲಿ ಕೂಡ AICRP ಯೋಜನೆಗೆ ಈ ರೀತಿ ವೇತನ ಕೊಡಲಾಗಿದೆ. ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರಿನಲ್ಲಿ ದೀರ್ಘಕಾಲದ ಡಿಬಿಟಿ ಧನಸಹಾಯ ಸಂಸ್ಥೆಯ ಸಹಾಯ ಯೋಜನೆಯಲ್ಲಿಯೂ ತಾತ್ಕಾಲಿಕವಾಗಿ ಸಿಬ್ಬಂದಿಗೆ ಈ ರೀತಿ ವೇತನ ಕೊಟ್ಟಿದ್ದು ಈಗ ಆ ಯೋಜನೆ ಮುಕ್ತಾಯಗೊಂಡಿರುತ್ತದೆ.
ಉ)	ಅರ್ಥಿಕ ಇಲಾಖೆ ಒಪ್ಪಿಗೆ ಪಡೆಯದೆ ಕಳೆದ 10 ವರ್ಷಗಳಲ್ಲಿ ನಿಯಮ ಬಾಹಿರವಾಗಿ ವೇತನ ನೀಡುತ್ತಿರುವುದು, ವಾರ್ಷಿಕ ವೇತನ ಮುಂಬಡ್ತಿ, ಇತರೆ ಸೌಲಭ್ಯಗಳನ್ನು, ಸೇವಾ ವಹಿ ನಿರ್ವಹಿಸಿರುವ ಬಗ್ಗೆ 2019–20ರ AG Audit ನಲ್ಲಿ ಆಕ್ಷೇಪಿಸಲಾಗಿದೆಯೇ; (ವಿವರಗಳೊಂದಿಗೆ ದಾಖಲೆ ನೀಡುವುದು)	ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 40 ಪಅಸೇ 2011, ದಿನಾಂಕ 01.02.2011 ರನ್ವಯ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯು ವಿಶ್ವವಿದ್ಯಾಲಯದ ವಾರ್ಷಿಕ ಪತ್ರಗಳನ್ನು ಪರಿಶೋಧಿಸಿ ವರದಿಗಳನ್ನು ನೀಡಲಾಗುತ್ತಿದೆ. ಪ್ರತಿ ವರ್ಷದ ಲೆಕ್ಕ ಪತ್ರಗಳಲ್ಲಿ AICRP-PHT ಯೋಜನೆಯ ಲೆಕ್ಕಗಳು ಸೇರಿರುತ್ತದೆ. 2019–20ನೇ ಸಾಲಿನಲ್ಲಿ ಅಕೌಂಟೆಂಟ್ ಜನರಲ್ ರವರಿಂದ ಲೆಕ್ಕ ಪರಿಶೋಧನೆ ಆಗಿರುವುದಿಲ್ಲ. ಆದರೆ, ರಾಜ್ಯ ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧನೆ ಆಗಿರುತ್ತದೆ. AICRP ಯೋಜನೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರು ವಿಚಾರಣೆಗೆ ಟಿಪ್ಪಣಿ ಒದಗಿಸಿರುತ್ತಾರೆ. ಸದರಿ ವಿಚಾರಣಾ ಟಿಪ್ಪಣಿಗೆ ಸಂಬಂಧಪಟ್ಟ ಅಧಿಕಾರಿಗಳಾದ ಡೀನ್, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಇವರು ಮಾಹಿತಿ ನೀಡಿರುತ್ತಾರೆ. 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು ಇನ್ನೂ ನಮ್ಮ ಕೈ ಸೇರಿರುವುದಿಲ್ಲ. ವರದಿಯಲ್ಲಿ ಸದರಿ ಆಕ್ಷೇಪಣೆ ಮುಂದುವರೆಯುತ್ತದೆಯೋ ಅಥವಾ ಕೈ ಬಿಡುವರೇ ಎಂಬ ಬಗ್ಗೆ ವರದಿ ಸ್ವೀಕಾರಗೊಂಡ ನಂತರವೇ ಗೊತ್ತಾಗುತ್ತದೆ ಎಂದು ವಿಶ್ವವಿದ್ಯಾಲಯವು ವರದಿಸಿರುತ್ತದೆ. ಆಕ್ಷೇಪಿಸಿದ ವಿಚಾರಣೆಯ ಪ್ಯಾರಾದ ಪ್ರತಿ ಲಗತ್ತಿಸಿದೆ.

ಊ)	ಸದರಿ ಆಕ್ಷೇಪಣೆಗಳಂತೆ ಸರ್ಕಾರಕ್ಕೆ ಅರ್ಥಿಕ ನಷ್ಟ ಉಂಟು ಮಾಡಿರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು; ನಷ್ಟವಾದ ಹಣವನ್ನು ಯಾರಿಂದ ವಸೂಲು ಮಾಡಲಾಗುವುದು?	ಈ ಯೋಜನೆಯ ಸಿಬ್ಬಂದಿ ದೀರ್ಘಾವಧಿಯಿಂದ ಕೆಲಸ ಮಾಡುತ್ತಿದ್ದು ಯೋಜನೆಯು ಸಮರ್ಪಕವಾಗಿ ನಡೆಯುತ್ತಿದ್ದು ಅನೇಕ ಅವಿಷ್ಕಾರಗಳು ತಂತ್ರಜ್ಞಾನಗಳು ಹೊರಬಂದಿದ್ದು, ಮೀನು ಸಂಸ್ಕರಣೆ ಕುರಿತಂತೆ ರೈತರಿಗೆ, ಉದ್ಯಮಿಗಳಿಗೆ, ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. Co-tenure ದೀರ್ಘಕಾಲೀನ ಆಧಾರದ ಮೇಲೆ ಸಿಬ್ಬಂದಿಯನ್ನು ಸಂಶೋಧನೆಗೆ ನೇಮಕ ಮಾಡಿಕೊಳ್ಳದಿದ್ದರೆ ಸಂಶೋಧನೆ ಕುಂಠಿತವಾಗುವ ಸಂಭವವಿದ್ದು ಅವರಿಗೆ ಸದರಿ ವೇತನ ಕೊಡಮಾಡಿದೆ. ಇದಲ್ಲದೆ ಈ ಯೋಜನೆಯಿಂದ ಅನೇಕ ಉಪಕರಣಗಳು ಬಂದಿವೆ. ಅವುಗಳಿಂದ ಸ್ನಾತಕೋತ್ತರ, ಪಿ.ಎಚ್.ಡಿ ಪದವಿಗಳ ವಿದ್ಯಾರ್ಥಿಗಳ ಉಪಯೋಗವಾಗಿದೆ. ಯೋಜನೆಯಲ್ಲಿ ಯಾವುದೇ ಆರ್ಥಿಕ ನಷ್ಟ ಆಗಿಲ್ಲದ ಕಾರಣ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ ಸದರಿ ಯೋಜನೆಗೆ ಸಂಬಂಧಿಸಿದ ಆರೋಪಗಳ ಕುರಿತಂತೆ, ಸತ್ಯಾಸತ್ಯತೆಯನ್ನು ಅರಿಯಲು ವಿಶ್ವವಿದ್ಯಾಲಯದ ಹಂತದಲ್ಲಿ ಆಂತರಿಕ ತನಿಖಾ ಸಮಿತಿಯನ್ನು ರಚಿಸಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ವಿಶ್ವವಿದ್ಯಾಲಯವನ್ನು ಕೋರಲಾಗಿರುತ್ತದೆ. ವರದಿ ಸ್ವೀಕೃತಗೊಂಡ ನಂತರ ಪರಿಶೀಲಿಸಲಾಗುತ್ತದೆ.

ಸಂಖ್ಯೆ: ಪಸಂಮೀ ಇ-277ಪಲಸೇ 2021

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

ಕರ್ನಾಟಕ ಮೀನುಗಾರಿಕೆ ಮಹಾವಿದ್ಯಾಲಯ ಮಂಗಳೂರು:-

111. AICRP on Post Harvent Technology" ಅಡಿ ಫಿಷರೀಜ್ ಕಾಲೇಜು ಮಂಗಳೂರಿನಲ್ಲಿ 7 ವಿಜ್ಞಾನಿಗಳನ್ನು /ಸಿಬ್ಬಂದಿ ನೇಮಕಾತಿ ಮಾಡಿಕೊಂಡಿರುವ ಬಗ್ಗೆ.

2009-10ನೇ ಸಾಲಿನಲ್ಲಿ All India Co-ordinated Research Project on Post Harvest Technology (AICRP-PHT) ರವರು ಅವರ ಪತ್ರ ಸಂ: ಎಫ್.ನಂ.2636/2009/ ಪಿ.ಎಚ್.ಟಿ. ದಿನಾಂಕ: 21.07.2009 ರನ್ವಯ ಕೆ.ವಿ.ಎ.ಎಫ್.ಎಸ್.ಯು. ಬೀದರ ಅಡಿ ಬರುವ ಫಿಷರೀಜ್ ಕಾಲೇಜು ಮಂಗಳೂರಿನಲ್ಲಿ ಸಹಕಾರ ಕೇಂದ್ರ ಪ್ರಾರಂಭಿಸಲು ಅನುಮೋದನೆ ನೀಡಿ "The posts as per norms wili be provided by the concerned university within one year" ಎಂದು ತಿಳಿಸಲಾಗಿದೆ. ಸದರಿ ಪತ್ರದ ಈ ಅಂಶದನ್ವಯ ಕೆ.ವಿ.ಎ.ಎಫ್.ಎಸ್.ಯು. ಬೀದರರವರು ತಮ್ಮಲ್ಲಿ ಇರುವ ಹುದ್ದೆಗಳನ್ನು ಐ.ಸಿ.ಎ.ಆರ್.ರವರಿಗೆ ನೀಡಬೇಕಾಗಿದೆ.

ಈ ಸಂಬಂಧ ಐ.ಸಿ.ಎ.ಆರ್. ಮತ್ತು ಕೆ.ವಿ.ಎ.ಎಫ್.ಎಸ್.ಯು. ರವರ ನಡುವೆ Memorandum of understanding ಆಗಿದ್ದು, MOU ದ I(B)(IV) ರಲ್ಲಿ The posts would be created by the host institution as per EFC sanction following the

(1)

own rules and regulations and such staff in termination of the project would be asst/liability of host institution ಎಂದು ತಿಳಿಸಿದೆ.

ಆದರೆ ಕೆ.ವಿ.ಎ.ಎಫ್.ಎಸ್.ಯು. ಬೀದರರವರು ಎಐಸಿಆರ್‌ಪಿಯ Post harvest Technology ಗಾಗಿ ಒಟ್ಟು ಏಳು ಜನ ಅನುಬಂಧ-31ರಲ್ಲಿ ವಿವರಿಸಿದಂತೆ ವಿಜ್ಞಾನಿಗಳನ್ನು ತಾತ್ಕಲಿಕವಾಗಿ ನೇಮಕ ಮಾಡಿಕೊಂಡಿದ್ದು ಸದರಿಯವರ ಸಿಬ್ಬಂದಿಗಳ ನೇಮಕ ಪ್ರಕ್ರಿಯೆ, ವಿದ್ಯಾರ್ಹತೆ ನೇಮಕಾತಿಯ ಇತರ ಮಾನದಂಡಗಳ ಬಗ್ಗೆ ಯಾವ ಹುದ್ದೆಗೆ ಎಷ್ಟು ವೇತನ ನಿಗದಿ ಮಾಡಲಾಗಿದೆ ಎಂಬ ವಿವರ ಮತ್ತು ಆಯಾ ಹುದ್ದೆಗೆ ವೇತನ ನಿಗದೀಕರಣ ಮಾನದಂಡಗಳೇನು? ಯಾವ ಆಧಾರದ ಮೇಲೆ ವೇತನ ನಿಗದಿ ಮಾಡಲಾಗಿದೆ ಎಂಬುದರ ಬಗ್ಗೆ ಲೆಕ್ಕಪರಿಶೋಧನೆಗೆ ಯಾವುದೇ ದಾಖಲೆಗಳು ಲಭ್ಯ ಪಡಿಸಿರುವುದಿಲ್ಲ. ಆದರೆ ಸದರಿ ಏಳು ಜನ ವಿಜ್ಞಾನಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿದೆ (ಸೇವಾ ಪುಸ್ತಕಗಳನ್ನು ಸಹಾ ಯಾವ ಆಧಾರದ ಮೇಲೆ ನಿರ್ವಹಿಸಲಾಗಿದೆ ಎಂಬ ವಿವರ ಇರುವುದಿಲ್ಲ ಕೇಂದ್ರ ಸರ್ಕಾರದ ಕೇಂದ್ರ ವೇತನ ಆಯೋಗದ (ಯು.ಜಿ.ಸಿ.-ಐ.ಸಿ.ಎ.ಆರ್) ವರದಿಯನ್ವಯ ವೇತನ ನಿಗದಿ ಮಾಡಿ 2010 ರಿಂದ ವೇತನ ಪಾವತಿ ಮಾಡುತ್ತಾ ಬರಲಾಗಿದೆ. ಅದಲ್ಲದೇ ಯು.ಜಿ.ಸಿ.-ಪೇಸ್ಕೇಲ್‌ಗಳನ್ವಯ ಬರಬೇಕಾದ ಎಲ್ಲಾ ಸೌಲಭ್ಯಗಳನ್ನು ಸಹ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಲಾಗಿದೆ. ಮುಂದುವರೆದು ವಾರ್ಷಿಕ ವೇತನ ಬಡ್ತಿ ಸೇರಿಸಿ ಗಳಿಕೆ ರಜೆಗಳನ್ನು ಸಹ ನೀಡಲಾಗಿದೆ. ಒಬ್ಬ ತಾತ್ಕಾಲಿಕ ಸಿಬ್ಬಂದಿಗಳಿಗೆ ತಾತ್ಕಾಲಿಕವಾಗಿ ನೇಮಿಸಿ ಯಾವ ಆಧಾರದ ಮೇಲೆ/ಯಾವ ಸರ್ಕಾರದ ಆದೇಶ/ವಿಶ್ವವಿದ್ಯಾಲಯದ ಸಿ. & ಆರ್. ಗಳನ್ವಯ ಸದರಿಯವರಿಗೆ ಈ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆ. ಎಂಬ ಮಾಹಿತಿ ಲಭ್ಯವಿರುವುದಿಲ್ಲ. ಈ ಸಬಂಧ ಐ.ಸಿ.ಎ.ಆರ್.ಅವರ ಪತ್ರ ಸಂ. 2(36)/2009/ಪಿಎಚ್.ಇ.ಟಿ. ದಿನಾಂಕ: 16.09.2020 ರಲ್ಲಿ ವಿವರಣೆ ನೀಡುತ್ತಾ "ಐ.ಸಿ.ಎ.ಆರ್. has no role to play with this matter" ಎಂದು ತಿಳಿಸಿದೆ ಅದಲ್ಲದೇ "The disbursement of salary with arrears as per the 7th CPC is strictly valid with satisfaction and compliance of the state Govt Rules" ಎಂದು ತಿಳಿಸಿದೆ.

ಸದರಿ ಯೋಜನೆಯಡಿ (AICRP-PHT) 2009 ರಿಂದ ಇಲ್ಲಿಯವರೆಗೆ ICAR ರವರು 75% ಮತ್ತು ರಾಜ್ಯ ಸರ್ಕಾರದವರು 25% ರಷ್ಟು ಹಣ ಹೂಡಿಕೆ ಮಾಡುತಿದ್ದು ಐ.ಸಿ.ಎ.ಆರ್. ರವರಿಗೆ ಸದರಿ ತಾತ್ಕಾಲಿಕ ಸಿಬ್ಬಂದಿಗೆ ಸಿಪಿಸಿ ರನ್ವಯ ವೇತನ ಭತ್ಯೆ ನೀಡುವಲ್ಲಿ ಅಭ್ಯಂತರವಿಲ್ಲದಿದ್ದರೂ, ಸಹಾ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಅನುಮತಿ ಪಡೆಯದೇ

[illegible]

2010 ರಿಂದ ಇಲ್ಲಿಯವರೆಗೆ ತಾತ್ಕಾಲಿಕ ಸಿಬ್ಬಂದಿಗೆ ಸಿ.ಪಿ.ಸಿ. [illegible] [illegible] ಭತ್ಯೆ ನೀಡುತ್ತಿರುವುದು ನಿಯಮ ಬಾಹಿರವಾಗಿದೆ ಎಂಬುದು ಸ್ಪಷ್ಟವಿದೆ. ಆದ್ದರಿಂದ ಈ ಕುರಿತು ಸೂಕ್ತ ಸ್ಪಷ್ಟ ವಿವರಣೆಯನ್ನು ಅವಶ್ಯಕ ಸರ್ಕಾರದ ಆದೇಶಗಳೊಂದಿಗೆ ಲೆಕ್ಕಪರಿಶೋಧನೆಗೆ ನೀಡುವವರೆಗೆ ಸದರಿ ಸಿಬ್ಬಂದಿಗೆ 2010 ರಿಂದೆ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತ ಸುಮಾರು ರೂ. 1,32,12,277/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 04 ದಿನಾಂಕ: 29-10-2020 ರಂದು ನೀಡಲಾಗಿದೆ.